ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B + ಗ್ರೇಡ್ – 2021)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade - 2021)

E-mail: registrar@rcub.ac.in
dpar@rcub.ac.in

ಕುಲಸಚಿವರ ಕಾರ್ಯಾಲಯ
Registrar's Office

Website: www.rcub.ac.in
Phone No.: 0831-2565241

ಕ್ರ.ಸಂ.:ರಾಚವಿ/ಬೆಳಗಾವಿ/ಕುಸಕಾ/ಸಿಆಸುವಿ/2024–25/3462 ದಿನಾಂಕ:14–10–2024

**2024–25ನೇ ಶೈಕ್ಷಣಿಕ ಸಾಲಿಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ (PG) ಅಧ್ಯಯನ ವಿಭಾಗಗಳಿಗೆ ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ Online ಮೂಲಕ ಅರ್ಜಿ ಆಹ್ವಾನಿಸಿರುವ ಬಗ್ಗೆ.**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ ಬೆಳಗಾವಿ ಹಾಗೂ ಅಧೀನಕ್ಕೊಳಪಡುವ ಸ್ನಾತಕೋತ್ತರ ಕೇಂದ್ರ ವಿಜಯಪುರ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯ ಸ್ನಾತಕೋತ್ತರ (PG) ಅಧ್ಯಯನ ವಿಭಾಗಗಳ ವಿವಿಧ ವಿಷಯಗಳಿಗೆ 2024–25ನೇ ಶೈಕ್ಷಣಿಕ ಸಾಲಿಗೆ ಮಾತ್ರ ಖಾಯಂ ಬೋಧಕ ಸಿಬ್ಬಂದಿಗಳಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗಿರುವ ಹೆಚ್ಚುವರಿ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ ಯುಜಿಸಿ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ – 2000ರ ನಿಯಮಾನುಸಾರ ಪೂರ್ಣಕಾಲಿಕ/ಅರೆಕಾಲಿಕ ತಾತ್ಕಾಲಿಕ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಈ ಕೆಳಕಾಣಿಸಿದ ಕೋಷ್ಟಕದನ್ವಯ ವಿಷಯಗಳ ಬೋಧನಾ ಕಾರ್ಯಭಾರಕ್ಕನುಗುಣವಾಗಿ, ಅರ್ಹ ಅಭ್ಯರ್ಥಿಗಳಿಂದ ಮೌಖಿಕ ಸಂದರ್ಶನಕ್ಕೆ (Walk–in-Interview) ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ www.rcub.ac.in ದಲ್ಲಿ ಲಭ್ಯವಿರುವ Google Sheet ಲಿಂಕನ್ನು ಬಳಸಿ ಎಲ್ಲ ವಿವರಗಳನ್ನು ಕಡ್ಡಾಯವಾಗಿ ಭರ್ತಿ ಮಾಡಿ ಅರ್ಜಿಯನ್ನು ಸಲ್ಲಿಸಲು ದಿನಾಂಕ:30-10-2024 ರಂದು ಕೊನೆಯ ದಿನವಾಗಿರುತ್ತದೆ. ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಒಂದು ಪ್ರತಿಯನ್ನು ನೇರ ಸಂದರ್ಶನದ ದಿನ ಸಲ್ಲಿಸುವುದು. ಅಭ್ಯರ್ಥಿಗಳಿಗೆ ಪ್ರತ್ಯೇಕ ಆಹ್ವಾನ ಪತ್ರಗಳನ್ನು ಕಳುಹಿಸಲಾಗುವದಿಲ್ಲ. ಸಂದರ್ಶನದ ದಿನಾಂಕವನ್ನು ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವದು ಕಾರಣ ವಿಶ್ವವಿದ್ಯಾಲಯದ ಜಾಲತಾಣವನ್ನು ನಿಯಮಿತವಾಗಿ ಗಮನಿಸಲು ತಿಳಿಸಲಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕುಲಸಚಿವರ ಕಾರ್ಯಾಲಯದ ದೂರವಾಣಿ ಸಂಖ್ಯೆ:0831 – 2565241 ಗೆ ಕರೆ ಮಾಡಿ ಸಂಪರ್ಕಿಸಬಹುದು.

**ಅಗತ್ಯವಿರುವ ವಿಷಯವಾರು ತಾತ್ಕಾಲಿಕ ಅತಿಥಿ ಉಪನ್ಯಾಸಕರ ಅಂದಾಜು ಹುದ್ದೆಗಳ ವಿವರ.**

| Sl. No | Name of the Subject | Number of Full time Guest Faculty required | Number of Part time Guest Faculty required |
|---|---|---|---|
| 01 | Kannada (RCU 02 FT) & ( VIJ 02 FT) | 4 | -- |
| 02 | Economics (RCU) | 2 | -- |
| 03 | Commerce (SRFGC 02 FT) & , (VIJ 02 FT) | 4 | -- |
| 04 | MSW (RCU) | 2 | -- |
| 05 | English (SRFGC) | 2 | 1 |
| 06 | Criminology and Forensic Science (RCU) | 1 | -- |
| 07 | Computer Science (RCU 03 FT , 01 PT) & (VIJ 04 FT ) | 7 | 1 |
| 08 | Education (RCU) | -- | 1 |
| 09 | History (RCU 02 FT) & ( VIJ 01 FT) | 3 | -- |
| 10 | Chemistry(RCU) | 1 | -- |
| 11 | Physics (RCU) | 3 | -- |
| 12 | Zoology (SRFGC) | 5 | -- |
| 13 | Botany (SRFGC) | 5 | -- |
| 14 | Journalism (RCU) | 3 | -- |
| 15 | Geography (RCU) | 1 | -- |

| Sl. No | Name of the Subject | Number of Full time Guest Faculty required | Number of Part time Guest Faculty required |
|---|---|---|---|
| 16 | Library and Information Science (RCU) | **1** | **1** |
| 17 | Mathematics (RCU) | **3** | **--** |
| ಸೂಚನೆ: 2024–25 ನೇ ಶೈಕ್ಷಣಿಕ ಸಾಲಿನ ವಿಭಾಗವಾರು ವಿದ್ಯಾರ್ಥಿಗಳ ದಾಖಲಾತಿಗಳ ಅನುಗುಣವಾಗಿ ಸಂದರ್ಶನಕ್ಕೆ ನೇಮಕಾತಿಗಳ ಅಂಕಿ ಸಂಖ್ಯೆಗಳ/ಅಂದಾಜು ಹುದ್ದೆಗಳ ಬದಲಾವಣೆಯ ತಿದ್ದುಪಡಿಗಳೊಪಟ್ಟಿರುತ್ತದೆ. | | | |

- **RCU (Rani Channamma University Belagavi. & VIJ (Vijaypur) & SRFGC (Sangolli Rayanna First Grade Constituent collage Belagavi)**

## ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು:

1. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರ ಹುದ್ದೆಗಳು ಸಂಪೂರ್ಣ ತಾತ್ಕಾಲಿಕವಾಗಿದ್ದು, ಯಾವುದೇ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಇರುವುದಿಲ್ಲ ಹಾಗೂ ಸೂಚಿಸಲಾದ ಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿದ್ದು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವಿಷಯಗಳ ಹೆಚ್ಚುವರಿ ಬೋಧನಾ ಕಾರ್ಯಭಾರದ ಅಗತ್ಯತೆಗನುಗುಣವಾಗಿ ಮತ್ತು ಸದ್ಯ ಜಾರಿಯಲ್ಲಿರುವ ಮೀಸಲಾತಿ ನಿಯಮಾವಳಿಗಳ ಅನುಸಾರ ನೇಮಿಸಿಕೊಳ್ಳಲಾಗುವುದು.
2. ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಳ್ಳುವ ಅಭ್ಯರ್ಥಿಗಳು ಜಾತಿ/ವರ್ಗ ಪ್ರಮಾಣ ಪತ್ರಗಳಿಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅಧಿಕೃತ ದಾಖಲಾತಿಗಳ ಧೃಢೀಕರಣ ಪ್ರತಿಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು ಮತ್ತು ಸದರಿ ಸಂದರ್ಶನ ದಿನದಂದು ದಾಖಲಾತಿ ಪರಿಶೀಲನಾ ಸಮಯದಲ್ಲಿ ಸದರಿ ಅರ್ಜಿಯೊಂದಿಗೆ ಸಲ್ಲಿಸಿದ ಎಲ್ಲ ದಾಖಲೆಗಳನ್ನು ಕಡ್ಡಾಯವಾಗಿ ಹಾಜರಪಡಿಸಬೇಕು.
3. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ (PG) ಅಧ್ಯಯನ ವಿಭಾಗಗಳಿಗೆ ತಾತ್ಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಲು ಆಸಕ್ತ ಇರುವ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಲಭ್ಯವಿರುವ Google Sheet ಲಿಂಕ್ ಮೂಲಕ ಅರ್ಜಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು ಹಾಗೂ ಅರ್ಜಿಯನ್ನು ಸಲ್ಲಿಸಲು **ದಿನಾಂಕ: 30–10–2024 ಕೊನೆಯ** ದಿನವಾಗಿರುತ್ತದೆ
4. ನಿಗದಿಪಡಿಸಿದ ದಿನಾಂಕದ ನಂತರ ತಲುಪಿದ, ಅಪೂರ್ಣವಾಗಿರುವ ಮತ್ತು ನಿಗದಿತ ನಮೂನೆಯಲ್ಲಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಈ ವಿಷಯದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಆಸ್ಪದವಿರುವದಿಲ್ಲ.
5. Google Sheet ಲಿಂಕ್ ಮೂಲಕ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳು, ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಲಭ್ಯವಿರುವ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅರ್ಜಿ ಹಾಗೂ ಸಂಬಂಧಿಸಿದ ಎಲ್ಲ ದಾಖಲೆಗಳ ಒಂದು ನಕಲು ಪ್ರತಿಯನ್ನು ಸ್ವಯಂ ದೃಢೀಕರಿಸಿ ಒಂದು ಪ್ರತಿಯನ್ನು ಕುಲಸಚಿವರು ಆಡಳಿತ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ. ಇವರ ವಿಳಾಸಕ್ಕೆ/ಕುಲಸಚಿವರ ಕಾರ್ಯಾಲಯಕ್ಕೆ ಖುದ್ದು ಹಾಜರಾಗಿ ಕೊನೆಯ ದಿನಾಂಕದ ಒಳಗಾಗಿ ಕಛೇರಿ ಅವಧಿಯಲ್ಲಿ ಸಲ್ಲಿಸಬೇಕು.
6. ತಾತ್ಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗೆ ಒಂದಕ್ಕಿಂತ ಹೆಚ್ಚು ವಿಭಾಗಗಳ ವಿಷಯಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಪ್ರತಿ ವಿಭಾಗಗಳ ವಿಷಯಗಳ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
7. ಅಭ್ಯರ್ಥಿಗಳು ಸೇವಾ ಅನುಭವ ಪ್ರಮಾಣ ಪತ್ರವನ್ನು ಈ ಪತ್ರಕ್ಕೆ ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿಯೇ ಸೇವಾ ಅವಧಿಯ (ಸೇವಾ ಅನುಭವದ) ವಿವರಗಳನ್ನು ತುಂಬಿ ತಾವು ಸೇವೆ ಸಲ್ಲಿಸಿದ ವಿಭಾಗದ ಅಥವಾ ಇಲಾಖೆಯ ಮುಖ್ಯಸ್ಥರು/ಪ್ರಾಂಶುಪಾಲರ ಸಹಿ ಪಡೆದು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕು ಹಾಗೂ ಆನ್‌ಲೈನ್ ಅರ್ಜಿಯಲ್ಲಿ ಯಥಾವತ್ತಾಗಿ ನಮೂದಿಸುವದು.
8. ಸೇವಾ ಅನುಭವ ಪ್ರಮಾಣ ಪತ್ರದ ನಮೂನೆಯಲ್ಲಿ ಈ ಹಿಂದಿನ ವರ್ಷದಲ್ಲಿ ಸೇವೆ ಸಲ್ಲಿಸಿದ ಸೇವಾ ವಿವರಗಳನ್ನು ಪಡೆದಿದ್ದಲ್ಲಿ ಪ್ರಸಕ್ತ ಸಾಲಿನ ಅಂದರೆ 2023–24ನೇ ಸಾಲಿನ ಸೇವಾ ವಿವರಗಳನ್ನು ಮಾತ್ರ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ನಿರ್ದೇಶಕರು/ಪ್ರಾಚಾರ್ಯರಿಂದ ಪಡೆದು ಒಟ್ಟು ಸೇವಾ ವಿವರಗಳನ್ನು ಅರ್ಜಿಯಲ್ಲಿ ನಮೂದಿಸುವದು.

9. Google Sheet ಲಿಂಕ್ ಮೂಲಕ ಅರ್ಜಿಯನ್ನು ಸಲ್ಲಿಸಿದ ಅಭ್ಯರ್ಥಿಗಳಿಗೆ ಕೊನೆಯ ದಿನಾಂಕದವರೆಗೆ ತಾವು ಸಲ್ಲಿಸಿದ ಅರ್ಜಿಯನ್ನು ಸರಿಪಡಿಸಿಕೊಳ್ಳಲು (Edit) ಮಾಡಲು ಅವಕಾಶವಿರುವದರಿಂದ ವಿದ್ಯಾರ್ಹತೆ, ಸೇವಾ ವಿವರಗಳು ಹಾಗೂ ಇನ್ನಿತರೆ ಅಗತ್ಯ ಮಾಹಿತಿಗಳನ್ನು ನಮೂದಿಸುವಾಗ ತಪ್ಪಾಗದಂತೆ ಗಮನಹರಿಸಿ ಸರಿಯಾದ/ನಿಖರ ಮಾಹಿತಿಯನ್ನು ದಾಖಲಿಸುವುದು, ತಪ್ಪಿದ್ದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಆಸ್ಪದವಿರುವದಿಲ್ಲ ವಿಶ್ವವಿದ್ಯಾಲಯದ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವದು.

10. ತಾವು ಅರ್ಜಿಯಲ್ಲಿ ನೀಡಿರುವ ಇ–ಮೇಲ್ ಮತ್ತು ದೂರವಾಣಿ ಸಂಖ್ಯೆ ಅಂತಿಮವಾಗಿದ್ದು, ನಂತರ ಬದಲಾವಣೆ ಆದರೆ ಯಾವುದೇ ಪತ್ರ ವ್ಯವಹಾರಗಳಿಗೆ ಆಸ್ಪದವಿರುವದಿಲ್ಲ.

11. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ತಾತ್ಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗೆ ನೇಮಕಾತಿಗಾಗಿ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಪ್ರಭಾವ ಬೀರುವ ಅಭ್ಯರ್ಥಿಯ ಅಭ್ಯರ್ಥಿತನವನ್ನು ಅನರ್ಹಗೊಳಿಸಲಾಗುತ್ತದೆ.

12. ವಿಷಯವಾರು ಮೌಖಿಕ ಸಂದರ್ಶನ (Walk–in Interview) ದಿನಾಂಕ ಮತ್ತು ಸಮಯ ಬದಲಾವಣೆಯಾದರೆ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣವನ್ನು ಪ್ರತಿನಿತ್ಯ ಗಮನಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರ ಕಾರ್ಯಾಲಯದ ಸಹಾಯವಾಣಿ ಸಂಖ್ಯೆ: 0831 – 2565241 ಗೆ ಕರೆ ಮಾಡಿ ತಿಳಿಯಬಹುದು.

13. ಸಂದರ್ಶನಕ್ಕಾಗಿ ಬರುವ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ತರಹದ ಭತ್ಯೆಗಳನ್ನು ನೀಡಲಾಗುವದಿಲ್ಲ.

14. ಸಂದರ್ಶನಕ್ಕಾಗಿ ಬರುವ ಅಭ್ಯರ್ಥಿಗಳು ವಿದ್ಯಾರ್ಹತೆ ಹಾಗೂ ಜಾತಿ/ವರ್ಗ ಪ್ರಮಾಣ ಪತ್ರಗಳಿಗೆ ಸಂಬಂಧಪಟ್ಟ ಅಧಿಕೃತ ಮೂಲ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸದರಿ ಸಂದರ್ಶನ ದಿನದಂದು ದಾಖಲಾತಿ ಪರಿಶೀಲನಾ ಸಮಯದಲ್ಲಿ ಸದರಿ ಅರ್ಜಿಯೊಂದಿಗೆ ಸಲ್ಲಿಸಿದ ಎಲ್ಲ ಶೈಕ್ಷಣಿಕ ದಾಖಲೆಗಳನ್ನು ಕಡ್ಡಾಯವಾಗಿ ಹಾಜರಪಡಿಸಬೇಕು.

15. 2024–25 ನೇ ಶೈಕ್ಷಣಿಕ ಸಾಲಿನ ವಿಭಾಗವಾರು ವಿದ್ಯಾರ್ಥಿಗಳ ದಾಖಲಾತಿ ಅನುಗುಣವಾಗಿ ಸಂದರ್ಶನಕ್ಕೆ ನೇಮಕಾತಿಗಳ ಅಂಕಿ ಸಂಖ್ಯೆಗಳ/ಅಂದಾಜು ಹುದ್ದೆಗಳ ಬದಲಾವಣೆಯು ತಿದ್ದುಪಡಿ ಷರತ್ತಿಗೆ ಒಳಪಟ್ಟಿರುತ್ತದೆ.

16. ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜು ಸಲ್ಲಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತಃ ಶಿಸ್ತು ಕ್ರಮಕ್ಕೆ ಒಳಪಡಿಸಿ ಅನರ್ಹಗೊಳಿಸಲಾಗುವದು ಹಾಗೂ ಒಂದು ವೇಳೆ ವಿದ್ಯಾರ್ಹತೆ, ಸೇವಾ ವಿವರಗಳು ಹಾಗೂ ಇನ್ನಿತರೆ ಮಾಹಿತಿಗಳನ್ನು ತಪ್ಪಾಗಿ ನಮೂದಿಸಿದ್ದಲ್ಲಿ, ಮುಂದಿನ ಪರಿಣಾಮಗಳಿಗೆ ಸಂಬಂಧಪಟ್ಟ ಅಭ್ಯರ್ಥಿಗಳೆ ನೇರ ಹೊಣೆಗಾರರಾಗಿರುತ್ತಾರೆ ಹಾಗೂ ಅಂತಹ ಅಭ್ಯರ್ಥಿಗಳನ್ನು ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಿಂದ ಅನರ್ಹಗೊಳಿಸಿ, ಅವರುಗಳ ವಿರುದ್ಧ ವಿಶ್ವವಿದ್ಯಾಲಯದಿಂದ ಕ್ರಮ ಜರುಗಿಸಲಾಗುವುದು.

17. ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಕ್ಕೆ ಸಂದರ್ಶನ ನಡೆಸುವುದು ವಿಶ್ವವಿದ್ಯಾಲಯದ ವಿವೇಚನೆಗೆ ಒಳಪಟ್ಟಿರುತ್ತದೆ.

18. ಈ ಅಧಿಸೂಚನೆಯಲ್ಲಿ ಪ್ರಕಟಿಸಿದ ಯಾವುದೇ ಹುದ್ದೆಗಳನ್ನು ತುಂಬುವ ಇಲ್ಲವೇ ತುಂಬದಿರುವ ಅಧಿಕಾರವು ವಿಶ್ವವಿದ್ಯಾಲಯಕ್ಕೆ ಸೇರಿದೆ.

19. ಅತಿಥಿ ಉಪನ್ಯಾಸಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಯಾವುದೇ ಸ್ಥಳದಲ್ಲಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.

20. ಆಯ್ಕೆಯಾದ ಅತಿಥಿ ಉಪನ್ಯಾಸಕರಿಗೆ ಗೌರವಧನವನ್ನು ನಿರ್ವಹಿಸುವ ಕಾರ್ಯಭಾರಕ್ಕೆ ಹಾಗೂ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿರುವ ಅರ್ಹತೆಗೆ (ವಿದ್ಯಾರ್ಹತೆ/ಸೇವಾ ಅವಧಿ) ಅನುಗುಣವಾಗಿ ವಿಶ್ವವಿದ್ಯಾಲಯದ ನಿಯಮಾನುಸಾರ ನೀಡಲಾಗುವುದು.

21. ಅತಿಥಿ ಉಪನ್ಯಾಸಕರಾಗಿ ನೇಮಕರಾಗಿ ಪದೇ ಪದೇ ಗೈರು ಹಾಜರಾಗುವ ಮತ್ತು ಇತರೆ ವಿಷಯಕ್ಕಗುಣವಾಗಿ ರದ್ದು ಪಡಿಸುವ ಅಧಿಕಾರ ವಿಶ್ವವಿದ್ಯಾಲಯ ಹೊಂದಿರುತ್ತದೆ. ವಿಶ್ವವಿದ್ಯಾಲಯದ ನಿರ್ಣಯವು ಅಂತಿಮವಾಗಿರುತ್ತದೆ.

22. ಅತಿಥಿ ಉಪನ್ಯಾಸಕರಾಗಿ ನೇಮಕಾತಿಯಾಗಿ ತಮ್ಮ ವೈಯಕ್ತಿಕ ಕಾರಣ ನೀಡಿ ರಾಜೀನಾಮೆಯನ್ನು ನೀಡುವ ಹಾಗೂ ಪದೇ ಪದೇ ಕರ್ತವ್ಯಕ್ಕೆ ಗೈರು ಹಾಜರಾಗುವ/ಕಾರ್ಯಭಾರ ಹೆಚ್ಚಿಗೆ ಆಗುವ ಸಂದರ್ಭದಲ್ಲಿ ವಿಭಾಗಗಳ ವಿಷಯಗಳಿಗೆ ಅತಿಥಿ ಉಪನ್ಯಾಸಕರನ್ನು ಕಾಯ್ದಿರಿಸಿದ ಪಟ್ಟಿಯಲ್ಲಿರುವ ಮುಂದಿನ ಅಭ್ಯರ್ಥಿಯನ್ನು/ಬೇರೊಬ್ಬರು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಅಧಿಕಾರವು ವಿಶ್ವವಿದ್ಯಾಲಯಕ್ಕೆ ಸೇರಿದೆ.

23. 2024–25 ನೇ ಶೈಕ್ಷಣಿಕ ಸಾಲಿನಲ್ಲಿ ಆಯ್ಕೆಗೊಂಡ / ಕರ್ತವ್ಯ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ವಿಶ್ವವಿದ್ಯಾಲಯದ ಶೈಕ್ಷಣಿಕ ವೇಳಾಪಟ್ಟಿಯಂತೆ 2024–25ನೇ ಸಾಲಿನ ಮುಕ್ತಾಯದವರೆಗೆ (ಬೋಧನಾ ಕಾರ್ಯಭಾರದ ಲಭ್ಯತೆಗನುಸಾರವಾಗಿ) ಅಥವಾ 10 ತಿಂಗಳಿಗೆ ಮಾತ್ರ ಇದರಲ್ಲಿ ಯಾವುದೂ ಮೊದಲು ಅಲ್ಲಿಯವರೆಗೆ ಮುಂದುವರೆಸಿ, ನಂತರ ಕರ್ತವ್ಯದಿಂದ ಬಿಡುಗಡೆಗೊಳಿಸುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ಸೇರಿದೆ.

24. ಅತಿಥಿ ಉಪನ್ಯಾಸಕರ ಆಯ್ಕೆಗೆ ಸಂಬಂಧಿಸಿದ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ www.rcub.ac.in ನಲ್ಲಿ ಹಂತ ಹಂತವಾಗಿ ಪ್ರಕಟಿಸಿಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಸದರಿ ಅಂತರ್ಜಾಲ ತಾಣವನ್ನು ಪ್ರತಿನಿತ್ಯ ಗಮನಿಸಲು ತಿಳಿಸಲಾಗಿದೆ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯ ಮುಖ್ಯ ಆವರಣದ ಸಿಂಡಿಕೇಟ್ ಸಭಾಂಗಣದಲ್ಲಿ ವಿವಿಧ ವಿಷಯಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ ಸೂಚಿಸಿದ ದಿನ ಹಾಗೂ ಸಮಯಕ್ಕೆ ಅನುಗುಣವಾಗಿ ಮೌಖಿಕ ಸಂದರ್ಶನಕ್ಕೆ Google Sheet ಲಿಂಕ್ ಮೂಲಕ ಭರ್ತಿ ಮಾಡಿದ ಒಂದು ಪ್ರತಿ ಅರ್ಜಿ ಹಾಗೂ ಮೂಲ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ತಪ್ಪಿದ್ದಲ್ಲಿ ಅಭ್ಯರ್ಥಿಗಳನ್ನು ಗೈರು ಹಾಜರವೆಂದು ಪರಿಗಣಿಸಲಾಗುವುದು.

**ವಿಶೇಷ ಸೂಚನೆ:**

- **ಮೌಖಿಕ ಸಂದರ್ಶನ (Walk-in Interview) ದಿನಾಂಕ ಮತ್ತು ಸಮಯ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಮುಂಬರುವ ದಿನಗಳಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣವನ್ನು ಪ್ರತಿನಿತ್ಯ ಗಮನಿಸಲು ತಿಳಿಸಲಾಗಿದೆ.**

- **ಸಂದರ್ಶನದ ಸಮಯಕ್ಕಿಂತ ಒಂದು ಗಂಟೆ ಮುಂಚಿತವಾಗಿ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲಿಸಲಾಗುವುದು.**

**ಸಹಿ/–**

**(ಸಂತೋಷ ಕಾಮಗೌಡ** ಕೆ.ಎ.ಎಸ್. (ಹಿರಿಯ ಶ್ರೇಣಿ))

**ಕುಲಸಚಿವರು**

# RANI CHANNAMMA UNIVERSITY BELAGAVI

**2024-25 APPLICATION FOR THE POST OF GUEST FACULTY IN THE PG-DEPARTMENT OF**

**______________________________ (MENTION THE SUBJECT)**

**(Submit separate application for each subject)**

| | | | |
|---|---|---|---|
| 1 | Name of the Applicant | | Affix recent Passport size photograph |
| 2 | Address for correspondence | | |
| | Mobile No: | | |
| | Email: | | |
| 3 | Category | GM / SC / ST / CAT-I / IIA / IIB / IIIA/ IIIB | |
| 4 | Gender | | |
| 5 | Date of Birth and Age | | |
| 6 | Education Qualification : (Enclose relevant attested documents) | | |

| Sl. No | Particulars of the Degree | Name of the University/ Board | Year of Passing | Total Max Marks (Including All Semesters) | Total Marks Obtained | Total Percentage of Marks (Aggregate) |
|---|---|---|---|---|---|---|
| 1 | Degree (Graduation) | | | | | |
| 2 | Master Degree (Post - Graduation) | | | | | |
| 3 | Ph.D. | | | | | |
| 4 | M.Phil | | | | | |

| | | | |
|---|---|---|---|
| 7. | Whether passed NET/JRF/SLET/SET with Year of Passing | NET with JRF | |
| | | NET | |
| | | SLET/SET | |

| | |
|---|---|
| 8. | Teaching Experience: (Enclose relevant attested documents)) |

| Sl.No | Name of the Institution/University | UG/PG | Number of years | Full/Part time |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |
| Total Number of years | | | | |

| | | |
|---|---|---|
| 9. | Research Experience,<br><br>Please specify<br><br>Publications if any<br><br>(Enclose relevant attested<br><br>documents) | |

| | |
|---|---|
| Post Doctorate Experience | ___________years |
| Number of Publications (Enclose the list) | |
| Conference (National) | |
| Conference (International) | |
| Number of Books published | |
| Any Other information | |

| | | |
|---|---|---|
| 10 | International / National /State Level Awards given by Govt | |
| 11. | Whether served as Guest Faculty in the previous years in the constituent colleges of the University/at University.<br>If yes, mention the year and period served.<br>(Enclose the relevant Documents) | |
| 12. | Present Status / Work place | |
| 13. | Other information if any. | |
| 14. | List of Enclosures | |

❖ **Note: The application form should be submitted in One (01) sets along with self - attested copies of testimonials / certificates/ taste /category certificates / marks cards and detailed bio-data. Any information given without proper proofs will not be considered. The claims have to authenticate with the original documents at the time of interview.**

## DECLARATION

I hereby declare that the particulars furnished above are true to the best of my knowledge & belief. If given an opportunity, I assure that I shall discharge my all responsibilities to the entire satisfaction of my superiors. I understand that this is a temporary assignment for the required limited period only. I shall not be involved in any in disciplinary behavior. I know the service of the Guest Faculty has no relation to the sanctioned post in the University. I will not claim the services of the Guest Faculty for regularization of services.

I am not carrying out any full time job/ academic degree at present and I will not do so during my period at your institution.

**Date:**

**Place:**

**SIGNATURE**

**ನಮೂನೆ:**

# <u>ಸೇವಾ ಪ್ರಮಾಣ ಪತ್ರ</u>

ಕಾಲೇಜಿನ ಹೆಸರು:____________________________________________

ಅತಿಥಿ ಉಪನ್ಯಾಸಕರ ಹೆಸರು:________________________________________

| Academic Year | ODD Semester | | Even Semester | |
|---|---|---|---|---|
| | Months | Days | Months | Days |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

- ❖ ಮೇಲ್ಕಂಡ ಅತಿಥಿ ಉಪನ್ಯಾಸಕರ ಸ್ನಾತಕೋತ್ತರ ತರಗತಿಗಳನ್ನು ಬೋಧಿಸಿದವರೇ? (ಹೌದು/ಇಲ್ಲ):________________
- ❖ ವಿ.ಸೂ.: 1. ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸಿದ ವರ್ಷಗಳಿಗೆ ಮಾತ್ರ ಸೇವಾ ವಿವರಗಳನ್ನು ನಮೂದಿಸುವುದು

  2. ಅತಿಥಿ ಉಪನ್ಯಾಸಕರ ಸೇವೆಯನ್ನು ತಿಂಗಳು ಮತ್ತು ದಿನಗಳಲ್ಲಿ (Months and Days) ಮಾತ್ರ ನಮೂದಿಸುವುದು ಹಾಗೂ ದಿನಾಂಕಗಳಲ್ಲಿ ನಮೂದಿಸಬಾರದು.

  3. Annual System of Year (Non-Semester) ಗೆ ಸಂಬಂಧಿಸಿದ ವಿವರಗಳನ್ನು (ODD-Semester) ಕಲಂಗಳ ಅಡಿಯಲ್ಲಿ ತಿಂಗಳು ಮತ್ತು ದಿನಗಳಲ್ಲಿ ನಮೂದಿಸುವುದು.

**ನಿರ್ದೇಶಕರು/ವಿಭಾಗದ ಮುಖ್ಯಸ್ಥರ/ಪ್ರಾಂಶುಪಾಲರು ಸಹಿ ಮೊಹರಿನೊಂದಿಗೆ**